**ಅಸಲು ದಾವ ಸಂಖ್ಯೆಃ 1125/2017**
**ಪಿಡಬ್ಲೂ -1**

**ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

**ದಿಃ 25-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. M C G ವಕೀಲರಿಂದ.**

ನಾನು ಇದ್ದ ಪ್ಲಾಟ ಒಟ್ಟು 40/60 ಇರುತ್ತದೆ. ಅಲ್ಲಿ ನೆಲಮಹಡಿ ಮತ್ತು 1 ನೇ ಮಹಡಿ ಇರುತ್ತದೆ. ನೆಲಮಹಡಿ 1000 Sq feet ಮತ್ತು 1 ನೇ ಮಹಡಿ 1000 Sq feet ಇರುತ್ತದೆ. 1 ನೇ ಮಹಡಿಯಲ್ಲಿ 2 ಬೆಡರೂಮ್, ಅಡುಗೆ ಮನೆ, ದೇವರ ಕೋಣೆ ಇರುತ್ತದೆ. ನೆಲಮಹಡಿಯಲ್ಲಿ 1 ದೊಡ್ಡ ಹಾಲ್ ಮತ್ತು ದಾವಾ ಆಸ್ತಿ 12x27 ಇರುತ್ತದೆ. ನನಗೆ 1 ನೇ ಮಹಡಿಯಲ್ಲಿ ಸಾಕಷ್ಟು ಜಾಗ ಇದ್ದು ನೆಲಮಹಡಿಯ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಮಾನಸ ಲಹರಿ ಮಹಿಳಾ ಮಂಡಳವನ್ನು ನಾನು ನೆಲಮಹಡಿಯ ಹಾಲ್ ನಲ್ಲಿ ನಡೆಸುತ್ತಿದ್ದೆ. ಅಲ್ಲಿ ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡುತ್ತಿದ್ದೇವು ಎಂದರೆ ಸರಿ. ಅಲ್ಲಿ 8 ಹೊಲಿಗೆ ಯಂತ್ರಗಳು ಇದ್ದವು. ಈಗ ಆ ಜಾಗ ಖಾಲಿ ಇರುತ್ತದೆ ಎಂದರೆ ಸಾಕ್ಷಿ ಅಲ್ಲಿ ಬೇರೆ ಸಾಮಾನೂಗಳನ್ನು ಇಟ್ಟಿದ್ದೇವೆ ಎನ್ನುತ್ತಾರೆ. ದಾವಾ ಆಸ್ತಿ 12x27 ನ್ನು ಕಮರ್ಷಿಯಲ್ ಉದ್ದೇಶಕ್ಕಾಗಿ ಬಳಸುತ್ತಿದ್ದಾರೆ ಎಂದರೆ ಸಾಕ್ಷಿಯು ಅದು ಸುಮಾರು ವರ್ಷಗಳಿಂದ ಬೀಗ ಹಾಕಿರುತ್ತಾರೆ ಎನ್ನುತ್ತಾರೆ. ಹೊಲಿಗೆ ಯಂತ್ರಗಳನು ರಿಪೇರಿ ಬಂದಾಗ ಪ್ರತಿವಾದಿ ನಂ . 2 ಇವರನ್ನು ಕರೆಸುತ್ತಿದ್ದೇ ಎಂದರೆ ಸರಿ. ಪ್ರತಿವಾದಿ ನಂ. 2 ನಾನು ಕೇಳಿದಾಗ ಅಡುಗೆ ಮಾಡಿಕೊಡುತ್ತಿದ್ದರು. ಪ್ರತಿವಾದಿ ನಂ. 2 ಇವರು ಕೆಟರಿಂಗ್ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಾನು ಒಬ್ಬಳೇ ಇರುತ್ತಿದದರಿಂದ ಪ್ರತಿವಾದಿ ನಂ. 2 ಇವರು ಅಡುಗೆ ಮಾಡಿಕೊಡುತ್ತಿದ್ದರು ಎಂದರೆ ಸಾಕ್ಷಿಯು ನಾನು ಕೇಳಿದಾಗ ಮಾತ್ರ

ಮಾಡಿಕೊಡುತ್ತಿದ್ದರು ಎನ್ನುತ್ತಾರೆ. ಹೀಗಾಗಿ ಪ್ರತಿವಾದಿ ನಂ. 2 ಮತ್ತು ನನ್ನ ನಡುವೆ ಒಳ್ಳೆಯ ಬಾಂಧವ್ಯ ಇತ್ತು ಎಂದರೆ ಸರಿ . ಆದ್ದರಿಂದ ನಾನು ಅವರ ಹೆಸರಿಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಹುಷಾರಿಲ್ಲದ ಸಂಧರ್ಬದಲ್ಲಿ ಅವರು ಏನೂ ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಈಗ ಸದರಿ ಆಸ್ತಿಯ ಬೆಲೆ ಹೆಚ್ಚಾಗಿರುವ ಕಾರಣ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 2 ಮತ್ತು ಪ್ರತಿವಾದಿ 1 ರವರ ಮಧ್ಯ ಬಾಡಿಗೆ ಕರಾರು ಆಗಿದ್ದು ಅದರ ಪ್ರಕಾರ ಅವರು ದಾವಾ ಆಸ್ತಿಯನ್ನು ಉಪಯೋಗಿಸುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಏನೂ ಗೊತ್ತಿಲ್ಲ. ನನಗೆ ಮೊಸ ಮಾಡುವ ಸಲುವಾಗಿ ಅವರು ದಾಖಲೆಯನ್ನು ಸೃಷ್ಟಿ ಮಾಡಿ ಆಸ್ತಿಯನ್ನು ಉಪಯೋಗಿಸುತ್ತಿದ್ದಾರೆ ಎನ್ನುತ್ತಾರೆ. ಪ್ರತಿವಾದಿ ನಂ. 2 ಇವರು ಮಾಲೀಕರು ಎನ್ನುವ ಉದ್ದೇಶದಿಂದ ಪ್ರತಿವಾದಿ ನಂ. 1 ಇವರಿಗೆ ಸಂಚಕಾರ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಮೊಸ ಮಾಡುವ ಉದ್ದೇಶದಿಂದ ಮಾಡಿರುತ್ತಾರೆ ಎನ್ನುತ್ತಾರೆ. ಸಂಚಕಾರ ಪತ್ರ ಮಾಡಿಕೊಟ್ಟ ನಂತರ ವಿ ಎಸ್ ದೇಶಪಾಂಡೆ ವಕೀಲರ ಮುಖಾಂತರ ಪ್ರತಿವಾದಿ ನಂ . 1 ಇವರು ಸಾರ್ವಜನಿಕ ನೋಟಿಸ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದನ್ನೇಲ್ಲಾ ನನಗೆ ಮೊಸ ಮಾಡುವ ಉದ್ದೇಶದಿಂದ ಪ್ರತಿವಾದಿ ನಂ. 1 ಮತ್ತು 2 ಇಬ್ಬರೂ ಸೇರಿ ಮಾಡಿರುತ್ತಾರೆ ಎನ್ನುತ್ತಾರೆ. ವಿ ಎಸ್ ದೇಶಪಾಂಡೆ ಇವರು ನನ್ನ ವಕೀಲರು ಎಂದರೆ ಸರಿ. ವಕೀಲರಿಗೆ ಎಲ್ಲ ವಿಷಯ ಗೊತ್ತಿದ್ದು ನೋಟಿಸ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಪಗೇರಿ ವಕೀಲರು ನನ್ನ ಮನೆ ಪಕ್ಕ ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಖರೀದಿ ತೆಗೆದುಕೊಂಡ ನಂತರ ಪ್ರತಿವಾದಿ ನಂ. 2 ಇವರು ಸಾಯಿ ಶ್ಯಾಮ ಕೋ ಆಪರೇಟಿವ ಸೊಸಾಯಿಟಿಯಲ್ಲಿ ಸಾಲ

**ಅಸಲು ದಾವ ಸಂಖ್ಯೆಃ 1125/2017**
**ಪಿಡಬ್ಲೂ -1**

ಪಡೆದುಕೊಂಡಿದ್ದಾರೆ ಎಂದರೆ ಅವರು ಏನು ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಸಿಟಿಎಸ್ ರೆಕಾರ್ಡನಲ್ಲಿ ಪ್ರತಿವಾದಿ ನಂ . 2 ಇವರ ಹೆಸರು ನಮೂದು ಇದ್ದ ಕಾರಣ ಅವರು ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿ ಅವರು ತಮ್ಮ ಹೆಸರು ಬರುವ ಹಾಗೇ ಮಾಡಿಕೊಂಡು ಸಾಲ ಪಡೆದಿದ್ದಾರೆ ಎನ್ನುತ್ತಾರೆ. ಓ ಎಸ್ ನಂ. 156/2012 ಡಿಕ್ರಿಯ ವಿರುದ್ಧ ಮೇಲ್ಮಣವಿ ಆರ್ ಎ 203/17 ಚಾಲ್ತಿಯಲ್ಲಿದ್ದ ಕಾರಣ ನನಗೆ ನೋಟಿಸ್ ಮತ್ತು ಬಾಕಿ ಇರುವ ಬಾಡಿಗೆ ಹಣವನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಕ್ಕಪಕ್ಕದ ಮನೆಯವರ ಮಾತು ಕೇಳಿ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿಯಿದೆ.**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**